
ನ್ಯೂಟನ್ ಹುಟ್ಟಿದ ಮನೆ

# ಅಲ್ಲಿ, ಮರದಡಿಯಲ್ಲಿ...

**ಲಂಡನ್‌ಗೆ ಇನ್ನೂರು ಕಿ.ಮೀ. ದೂರದಲ್ಲಿರುವ ವುಲ್ಸ್ ಥೋರ್ಪ್ ಮ್ಯಾನರ್, ನ್ಯೂಟನ್ ಕಾರಣದಿಂದಾಗಿ ವಿಜ್ಞಾನ ಪ್ರಿಯರಿಗೆ ಬಹು ಇಷ್ಟವಾದ ಸ್ಥಳ. ನ್ಯೂಟನ್ನನ ಎಲ್ಲ ಪ್ರಮುಖ ಪ್ರಯೋಗಗಳೂ ನಡೆದ ಮಹಾಸನ್ನಿಧಿಯನ್ನು ನೋಡುವುದೇ ಒಂದು ವಿಶಿಷ್ಟ ಸಂಭ್ರಮ.**

**■ ಸಿಡ್ನಿ ಶ್ರೀನಿವಾಸ್**


ಗ್ರಾಂಥಾಮ್ ಪಟ್ಟಣದಲ್ಲಿರುವ ನ್ಯೂಟನ್ ಓದಿದ ಶಾಲೆ

ಐಸಾಕ್ ನ್ಯೂಟನ್ ಹುಟ್ಟಿದ ಮನೆಯ (ಅದೀಗ ಮ್ಯೂಸಿಯಂ ಆಗಿದೆ) ಮಹಡಿಯಲ್ಲಿ ವಿಶಾಲವಾದ ಒಂದು ಕೊಠಡಿ. ಅಲ್ಲಿಯ ಗೈಡ್ ರಿಚರ್ಡ್ ಫೇರ್ ಹೆಡ್ ಅವರನ್ನು, ಓರ್ವ ಯುವಕ ಚೇಷ್ಟೆಗೆ ಕೇಳಿದ: ‘ಏನು ಮಹಾ ಈ ರೂಮು?’. ರಿಚರ್ಡ್ ಕೋಪಗೊಂಡು ಉತ್ತರಿಸಿದರು:

‘ಆಧುನಿಕ ಭೌತ ವಿಜ್ಞಾನಕ್ಕೆ ಬುನಾದಿ ಹಾಕಿದ್ದೇ ಈ ಕೊಠಡಿ. ಇಲ್ಲಿಯೇ ನ್ಯೂಟನ್ ತನ್ನ ಗುರುತ್ವಾಕರ್ಷಣೆಯ ಸಿದ್ಧಾಂತವನ್ನು ರೂಪಿಸಿದ್ದು; ಈ ರೂಮಿನಲ್ಲಿಯೇ ಬಿಳಿ ಬೆಳಕಿನಲ್ಲಿ ಏಳು ಬಣ್ಣಗಳಿವೆ ಎಂದು ಕಂಡುಹಿಡಿದು ಬೆಳಕು ವಿಜ್ಞಾನಕ್ಕೆ ನಾಂದಿ ಹಾಡಿದ್ದು; ಇಲ್ಲಿಯೇ ಅವನು ಕುಳಿತು ಕ್ಯಾಲ್ಕುಲಸ್ ಎಂಬ ಗಣಿತ ಪ್ರಭೇದವನ್ನು ಕಂಡುಹಿಡಿದದ್ದು. ಇಷ್ಟೆಲ್ಲವನ್ನು ನ್ಯೂಟನ್ ಸಾಧಿಸಿದ್ದು ಕೇವಲ ಎರಡು ವರ್ಷಗಳಲ್ಲಿ!’

ಕೇಳಿಸಿಕೊಳ್ಳುತ್ತಿದ್ದ ನಾನು ಮನಸ್ಸಿನಲ್ಲೇ ಹೇಳಿಕೊಂಡೆ, ‘ಹೌದು, ಇದೊಂದು ಮಹಾ ಸನ್ನಿಧಿ’. ಒಂದು ರೀತಿಯಲ್ಲಿ ನ್ಯೂಟನ್ ಹುಟ್ಟಿದ ಮೇಲೆ ಹಳೆಯ ಜಗವು ಸತ್ತು ಹೊಸತು ಪ್ರಾರಂಭವಾಯಿತು. ಖ್ಯಾತ ವಿಜ್ಞಾನಿ ವೈನ್ ಬರ್ಗ್ ಹೇಳುವಂತೆ, ‘ನ್ಯೂಟನ್ ತನ್ನ ಸಿದ್ಧಾಂತವನ್ನು ನೀಡುತ್ತಿದ್ದಂತೆ, ಜನ ಭೂತ–ಪಿಶಾಚಿಗಳನ್ನು ಸುಡುವುದು ನಿಂತುಹೋಯಿತು. ವೈಜ್ಞಾನಿಕ ಪದ್ಧತಿ ಜಾರಿಗೆ ಬಂತು’.

ವುಲ್ಸ್ ಥೋರ್ಪ್ ಮ್ಯಾನರ್ (Woolsthorpe Manor) ಲಂಡನ್ನಿಗೆ ಸುಮಾರು 200 ಕಿ.ಮೀ. ದೂರ, ಎರಡು ಮೂರು ಗಂಟೆಗಳ ಟ್ರೈನ್ ಪ್ರಯಾಣ. ಅಲ್ಲಿಗೆ ಹಲವಾರು ಬಾರಿ ಹೋಗಿದ್ದೇವೆ. ನಮಗೆ ಪರಿಚಿತ ಸ್ಥಳ. ಆದರೆ 2022ರ ಆಗಸ್ಟ್ 13ರಂದು ಹೋದಾಗ, ಲಂಡನ್ ವಾಸಿ ನಮ್ಮ ಬಂಧು ಶಾನ್